ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆ

ಕರ್ನಾಟಕ ವಿಧಾನ ಪರಿಷತ್ತು

ನೂರ ನಲವತ್ತೊಂದನೆಯ ಅಧಿವೇಶನ

ಗುರುವಾರ, ದಿನಾಂಕ : 24 ನೇ ಸೆಪ್ಟೆಂಬರ್, 2020

ಆಲಮಟ್ಟಿ ಅಣೆಕಟ್ಟು 524 ಅಡಿಗೆ ಹೆಚ್ಚಿಸುವ ಬಗ್ಗೆ

ಶ್ರೀ ಪ್ರಕಾಶ್ ಕೆ. ರಾಥೋಡ್(ನಾಮನಿರ್ದೇಶನ ಹೊಂದಿದವರು) –

515 (478) ಮಾನ್ಯ ಜಲಸಂಪನ್ಮೂಲ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಆಲಮಟ್ಟಿ ಅಣೆಕಟ್ಟನ್ನು 524 ಅಡಿಗೆ ಹೆಚ್ಚಿಸುವ ಯೋಜನೆ ಸರ್ಕಾರಕ್ಕಿದೆಯೇ;

(ಆ) ಹಾಗಿದ್ದಲ್ಲಿ, ಅಣೆಕಟ್ಟು ಎತ್ತರಿಸುವ ಕಾರ್ಯ ಯಾವ ಹಂತದಲ್ಲಿದೆ; (ವಿವರ ನೀಡುವುದು)

(ಇ) ಆಲಮಟ್ಟಿ ಅಣೆಕಟ್ಟು ಎತ್ತರವನ್ನು ಹೆಚ್ಚಿಸುವುದರಿಂದ ಮುಳಗಡೆಯಾಗುವ ಭೂಮಿಯನ್ನು ಸ್ವಾಧೀನ ಪಡಿಸಿಕೊಳ್ಳಲಾಗಿದೆಯೇ; (ವಿವರ ನೀಡುವುದು)

(ಈ) ಆಲಮಟ್ಟಿ ಅಣೆಕಟ್ಟಿನ ಎತ್ತರದಿಂದ ಮುಳುಗಡೆಯಾಗಿರುವ ಊರು ಹಾಗೂ ಜಮೀನುಗಳ ವಿವರ ನೀಡುವುದು;

(ಉ) ಮುಳಗಡೆಯಾಗುವ ಜಮೀನುಗಳಿಗೆ ಹಾಗೂ ಮನೆಗಳಿಗೆ ಹಣ ನಿಗಧಿ ಪಡಿಸಲಾಗಿದೆಯೇ; ಬೇಕಾಗಿರುವ ಪರಿಹಾರದ ಮೊತ್ತ ಎಷ್ಟು?